ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ

C.C No. 62/2017
CW-29 PW-7

ಹೆಸರು ಃ ಧನಾಪತಿ ಕಟ್ಟಿಮನಿ

ತಂದೆ ಹೆಸರು ಃ ಭೀಮಶ್ಯಾ

ವಯಸ್ಸು ಃ 62 ವರ್ಷ

ಉದ್ಯೋಗ ಃ ನಿವೃತ್ತ ಆರಕ್ಷಕ ಉಪನಿರೀಕ್ಷಕರು,

ವಾಸ ಸ್ಥಳ ಃ ಕಲಬುರಗಿ.

---

ಪ್ರಮಾಣವಚನ ಭೋಧಿಸಲಾಯಿತು. ದಿಃ05-11-2025

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ

2016 ರಿಂದ ಸೆಪ್ಟೆಂಬರ್ 2018ರ ವರೆಗೆ ಕಾಳಗಿ ವೃತ್ತದ ವೃತ್ತ ನಿರೀಕ್ಷಕನಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ: 11-10-2016ರಂದು ಸದರಿ ಪ್ರಕರಣದ ಕಡತವನ್ನು ಚಾಸಾ-28ರವರಿಂದ ಪಡೆದು ಮುಂದಿನ ತನಿಖೆಯನ್ನು ಜರುಗಿಸಿರುತ್ತೇನೆ. ದಿನಾಂಕ: 17-10-2016ರಂದು ಸದರಿ ಪ್ರಕರಣದಲ್ಲಿ ಆರೋಪಿ ಮತ್ತು ಅಪಘಾತಕ್ಕೀಡಾದ ವಾಹನದ ಕುರಿತು ತಪಾಸಣೆಗಾಗಿ ಚಾಸಾ-27ರವರನ್ನು ನೇಮಿಸಿ ಅವರಿಂದ ವರದಿ ಪಡೆದುಕೊಂಡಿರುತ್ತೇನೆ. ದಿನಾಂಕ 08-12-2016ರಂದು ಸದರಿ ಪ್ರಕರಣದ ಅಪಘಾತಕ್ಕೀಡಾದ ಮೋಟಾರ ಸೈಕಲ್ ನಂ. ಕೆಎ-25/ಕ್ಯೂ-8522 ನೇದ್ದರ ತಪಾಸಣಾ ವರದಿಯನ್ನು ಆರ್.ಟಿ.ಓ. ಕಲಬುರಗಿ ರವರಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿನಾಂಕ: 19-12-2016ರಂದು ಮೃತ ವಿಶ್ವನಾಥ ತಂದೆ ಮಲ್ಲಿಕಾರ್ಜುನ ಈತನ ಮರಣೋತ್ತರ ಪರೀಕ್ಷಾ ವರದಿಯನ್ನು ಚಾಸಾ-22ರವರಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕ: 21-12-2016ರಂದು ಚಾಸಾ-27ರವರು ವಾಹನ ಪತ್ತೆ ಮಾಡಿ ಆರೋಪಿಯನ್ನು ಮತ್ತು ಅಪಘಾತಪಡಿಸಿದ ವಾಹನವನ್ನು ನನ್ನ ಸಮಕ್ಷಮ ಹಾಜರುಪಡಿಸಿರುತ್ತಾರೆ. ಅದೇ ದಿನ ಆರೋಪಿಯನ್ನು ವಿಚಾರಣೆ ಮಾಡಿ ಆತನ ಸ್ವ-ಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆತನು ಒಪ್ಪಿಕೊಂಡ ಮೇರೆಗೆ ಚಾಸಾ -1ರವರನ್ನು ಠಾಣೆಗೆ ಕರೆಯಿಸಿ ಆರೋಪಿಯನ್ನು ಚಾಸಾ-1ರವರಿಗೆ ತೋರಿಸಿ ಅವರ ಪುರವಣಿ ಹೇಳಿಕೆಯನ್ನು

ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-2, ಚಾಸಾ-3, ಚಾಸಾ-4, ಚಾಸಾ-5, ಚಾಸಾ-6, ಚಾಸಾ-7, ಚಾಸಾ-10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಆರೋಪಿಯನ್ನು ದಸ್ತಗರಿ ನಿಯಮ ಪಾಲಿಸಿ, ವಶಕ್ಕೆ ಪಡೆದಾಗ ಆರೋಪಿತನು ತನ್ನೊಂದಿಗೆ ಬಂದರೆ ಅಪಘಾತಪಡಿಸಿದ ವಾಹನವನ್ನು ತೋರಿಸುತ್ತೇನೆಂದು ಹೇಳಿದಾಗ, ಸದರಿ ವಾಹನವನ್ನು ಈಗಾಗಲೇ ಚಾಸಾ-27ರವರು ಜಪ್ತುಪಡಿಸಿಕೊಂಡು ಮಾಡಬೂಳ ಪೊಲೀಸ ಠಾಣೆಗೆ ತೆಗೆದುಕೊಂಡು ಹೋಗಿದ್ದ ಕಾರಣ, ನಾನು ಆರೋಪಿಯನ್ನು ಮತ್ತು ಪಂಚರಾದ ಚಾಸಾ-18 ಮತ್ತು 19 ರವರನ್ನು ಮಾಡಬೂಲ ಪೊಲೀಸ ಠಾಣೆಗೆ ಕರೆದುಕೊಂಡು ಹೋಗಿ ಆರೋಪಿತನಿಗೆ ವಾಹನ ತೋರಿಸಿದಾಗ, ಆತ ಅದನ್ನು ನೋಡಿ ಒಪ್ಪಿದ ಮೇರೆಗೆ ಪಂಚರ ಸಮಕ್ಷಮ ಸದರಿ ಬೊಲೆರೋ ಪಿಕ-ಆಫ್ ವಾಹನ ನೋಂದಣಿ ಸಂಖ್ಯೆ ಕೆಎ-32/ಸಿ-1306 ವಾಹನವನ್ನು ನಿಶಾನೆ ಪಿ-4, ಪಂಚನಾಮೆ ಅಡಿಯಲ್ಲಿ ಜಪ್ತುಪಡಿಸಿಕೊಂಡಿರುತ್ತೇನೆ. ನಂತರ ಆರೋಪಿಯನ್ನು ಸೂಕ್ತ ಜಾಮೀನು ಪಡೆದು ಬಿಡುಗಡೆ ಮಾಡಿರುತ್ತೇನೆ.

ದಿನಾಂಕ: 23-12-2016ರಂದು ಮೃತ ಶಂಕರ ರವರ ಮರಣೋತ್ತರ ಪರೀಕ್ಷಾ ವರದಿಯನ್ನು ಚಾಸಾ-22ರವರಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಅಪಘಾತಕ್ಕೀಡಾದ ಮೋಟಾರ ಸೈಕಲ್ ನೋಂದಣಿ ಸಂಖ್ಯೆ: ಕೆಎ-25/ಕ್ಯೂ-8522 ನೇದ್ದನ್ನು ವಾಹನದ ಮಾಲೀಕರಿಗೆ ನಿಶಾನೆ ಪಿ-6ರಂತೆ ಇಂಡೆಮನಿಟಿ ಬಾಂಡ್ ಪಡೆದು ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಚಾಸಾ-8, ಚಾಸಾ-9ರವ ಮರು ಹೇಳಿಕೆಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿನಾಂಕ: 04-01-2017ರಂದು ಅಪಘಾತಪಡಿಸಿದ ಬೊಲೆರೋ ಪಿಕ-ಆಫ್ ವಾಹನದ ಐ.ಎಂ.ವಿ. ವರದಿಯನ್ನು ಚಾಸಾ-20ರವರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ಘಟನಾ ಸ್ಥಳದ ನಕಾಶೆಯನ್ನು ಚಾಸಾ-23ರವರಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕ: 08-01-2017ರಂದು ಅಪಘಾತಕ್ಕೀಡಾದ ಮೋಟಾರ ಸೈಕಲ್ ನ್ನು ಇಂಡೆಮನಿಟ್ ಬಾಂಡನ್ನು ಪಡೆದು ವಾಹನದ ಮಾಲೀಕರಾದ ಚಾಸಾ-11ರವರಿಗೆ ಬಿಟ್ಟುಕೊಟ್ಟಿರುತ್ತೇನೆ. ನಾನು ಜರುಗಿಸಿದ ಪಂಚನಾಮೆ ಸಮಯದಲ್ಲಿ ಮತ್ತು ವಾಹನಗಳನ್ನು ಬಿಟ್ಟುಕೊಡುವ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆಸಿರುತ್ತೇನೆ. ನಾನು ಸಿ.ಸಿ. ಟಿ.ವ್ಹಿ. ಫುಟೇಜ್ ನ ಸಿ.ಡಿ.ಯನ್ನು ಚಾಸಾ-27ರವರಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆರೋಪಿತನ ವಿರುದ್ಧ ಸಾಕಷ್ಟು ಸಾಕ್ಷ್ಯಧಾರಗಳು ಸಿಕ್ಕ ಮೇರೆಗೆ ಆರೋಪಿತನ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಬೊಲೆರೋ ವಾಹನದ ಜಪ್ತು ಪಂಚನಾಮೆ ಸಮಯದಲ್ಲಿ ತೆಗೆದ 5 ಭಾವಚಿತ್ರಗಳನ್ನು ಮತ್ತು ಅದರ ಸಿ.ಡಿ.ಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಭಾವಚಿತ್ರಗಳ ಮತ್ತು ಸಿ.ಡಿ.ಯ ಸಾಕ್ಷ್ಯತ್ವ ಪ್ರಮಾಣ ಪತ್ರ ಇಲ್ಲದಿದ್ದ ಕಾರಣ, ಅವುಗಳನ್ನು ನಿಶಾನೆಗೊಳಿಸಲಾಗಲಿಲ್ಲ. ನಾನು ಪಡೆದ ಚಾಸಾ-1ರವರ ಪುರವಣಿ ಹೇಳಿಕೆಯನ್ನು ನೋಡಿದರೆ ಗುರುತಿಸುತ್ತೇನೆ. ಅದು ಈಗಾಗಲೇ ನಿಶಾನೆ ಪಿ-2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-2(ಎ) ಎಂದು ಗುರುತಿಸಲಾಯಿತು. ನಾನು ಪಡೆದ ಚಾಸಾ-8ರವರ ಪುರವಣಿ ಹೇಳಿಕೆಯನ್ನು ನೋಡಿದರೆ ಗುರುತಿಸುತ್ತೇನೆ. ಅದು ಈಗಾಗಲೇ ನಿಶಾನೆ ಪಿ-3 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-3(ಎ) ಎಂದು ಗುರುತಿಸಲಾಯಿತು. ನಾನು ಜರುಗಿಸಿದ ಬೊಲೆರೋ ವಾಹನದ ಜಪ್ತು ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಅದು ಈಗಾಗಲೇ ನಿಶಾನೆ ಪಿ-4 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-4(ಬಿ) ಎಂದು ಗುರುತಿಸಲಾಯಿತು. ನಾನು ಸ್ವೀಕರಿಸಿದ ಬೊಲೆರೋ ಪಿಕ-ಆಫ್ ವಾಹನದ ಇಂಡೆಮನಿಟಿ ಬಾಂಡನ್ನು ನೋಡಿದರೆ ಗುರುತಿಸುತ್ತೆನೆ, ಅದು ಈಗಾಗಲೇ ನಿಶಾನೆ ಪಿ-6 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-6(ಬಿ) ಎಂದು ಗುರುತಿಸಲಾಯಿತು. ಚಾಸಾ-11ರವರ ನಾನು ಪಡೆದಿರುವ ಹೇಳಿಕೆಯನ್ನು ನೋಡಿದರೆ ಗುರುತಿಸುತ್ತೇನೆ. ಅದು ಈಗಾಗಲೇ ನಿಶಾನೆ ಪಿ-7 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-7(ಎ) ಎಂದು ಗುರುತಿಸಲಾಯಿತು. ನಾನು ಸ್ವೀಕರಿಸಿದ ವಿಶ್ವನಾಥ ಮತ್ತು ಶಂಕರರಾವ ರವರ ಶವ ಪರೀಕ್ಷಾ ವರದಿಯನ್ನು ನೋಡಿದರೆ ಗುರುತಿಸಿಸುತ್ತೇನೆ. ಅವುಗಳು ಈಗಾಗಲೇ ನಿಶಾನೆ ಪಿ-10 ಮತ್ತು ಪಿ-11 ಎಂದು ಗುರುತಿಸಲಾಗಿದ್ದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಶಾನೆ ಪಿ-10(ಎ) ಮತ್ತು ಪಿ-11(ಎ) ಎಂದು ಗುರುತಿಸಲಾಯಿತು. ನಾನು ಸ್ವೀಕರಿಸಿದ ಮೋಟಾರ ಸೈಕಲನ ಐ.ಎಂ.ವ್ಹಿ. ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಅದು ಈಗಾಗಲೇ ನಿಶಾನೆ ಪಿ-12 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-12(ಎ) ಎಂದು ಗುರುತಿಸಲಾಯಿತು. ನಾನು ಸ್ವೀಕರಿಸಿದ ಬೊಲೆರೋ ಪಿಕ-ಆಫ್ ವಾಹನದ ಐ.ಎಂ.ವ್ಹಿ. ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗಾಗಲೇ ನಿಶಾನೆ ಪಿ-13 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-13(ಎ) ಎಂದು ಗುರುತಿಸಲಾಯಿತು. ಚಾಸಾ-2 ರಿಂದ ಚಾಸಾ-7, ಚಾಸಾ-9, ಚಾಸಾ-11 ರವರ ಪುರವಣಿ ಹೇಳಿಕೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಶಾನೆ ಪಿ-15 ರಿಂದ ನಿಶಾನೆ ಪಿ-22 ಎಂದು ಗುರುತಿಸಲಾಯಿತು. ನಿಶಾನೆ ಪಿ-15 ರಿಂದ ಪಿ-22 ರಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಶಾನೆ ಪಿ-15(ಎ) ರಿಂದ ನಿಶಾನೆ ಪಿ-22(ಎ) ಎಂದು ಗುರುತಿಸಲಾಯಿತು. ಅಪಘಾತಕ್ಕೀಡಾದ ಮೋಟಾರ ಸೈಕಲ್

ಸಂಖ್ಯೆ: ಕೆಎ-25/ಕ್ಯೂ-8522ನ್ನು ಬಿಡುಗಡೆ ಮಾಡುವಾಗ ಪಡೆದ ಇಂಡೆಮನಿಟಿ ಬಾಂಡನ್ನು ನಿಶಾನೆ ಪಿ-23 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-23(ಎ) ಎಂದು ಗುರುತಿಸಲಾಯಿತು.

ನಾನು ಆ ದಿನ ವಶಕ್ಕೆ ಪಡೆದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತ ಇಂದು ಗೈರು ಹಾಜರಿದ್ದು, ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ವಿನಂತಿ ಅರ್ಜಿ ಸಲ್ಲಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್.ಎನ್.ಪಿ. ವಕೀಲರಿಂದ :</u>

ನನಗೆ ಅಪಘಾತದ ಕುರಿತು ಮಾಹಿತಿಯನ್ನು ದಿನಾಂಕ: 11-10-2016ರಂದು ಚಾಸಾ-27ರವರು ನನಗೆ ಕಡತ ಹಸ್ತಾಂತರ ಮಾಡಿದ ನಂತರ ಗೊತ್ತಾಯಿತು. ನಾನು ಅಪಘಾತದ ಸ್ಥಳಕ್ಕೆ ಹೋಗಿರುತ್ತೇನೆ. ಆದರೆ ಯಾವ ದಿನ ಹೋಗಿದ್ದೆ ಎಂದು ಈಗ ನನಗೆ ನೆನಪಿಲ್ಲ. ನಾನು ಅಪಘಾತದ ಸ್ಥಳಕ್ಕೆ ಹೋದಾಗ, ಅಲ್ಲಿ ಯಾವುದೇ ವಾಹನಗಳು ಇರಲಿಲ್ಲ. ನಾನು ಘಟನಾ ಸ್ಥಳಕ್ಕೆ ಎಂದಿಗೂ ಭೇಟಿ ನೀಡಿಲ್ಲ ಈಗ ಭೇಟಿ ನೀಡಿದ್ದೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ-14 ನಕಾಶೆ ಪಡೆಯುವ ಮೊದಲು ನಾನು ಯಾವುದೇ ಕಚ್ಚಾ ನಕಾಶೆಯನ್ನು ತಯ್ಯಾರಿಸಿಲ್ಲ. ನಿಶಾನೆ ಪಿ-14ರಲ್ಲಿ ನಕಾಶೆಯನ್ನು ಯಾವ ದಿನದಂದು ತಯ್ಯಾರಿಸಲಾಯಿತು ಎಂದು ನಮೂದು ಮಾಡಿಲ್ಲ ಎಂದರೆ ಸರಿ. ನಾನು ಎಲ್ಲ ಕಡತಗಳನ್ನು ಪರಿಶೀಲನೆ ಮಾಡಿದ ನಂತರವೇ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ನಾನು ಯಾಂತ್ರಿಕವಾಗಿ ಯಾವುದೇ ತನಿಖೆ ಜರುಗಿಸದೆ ಆರೋಪಿತನ ವಿರುದ್ಧ ತಪ್ಪಾದ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿ ಕುಟುಂಬದವರಿಗೆ ವಿಮಾ ಹಣ ಸಿಗಲಿ ಎಂದು ನಾನು ಸುಳ್ಳು ವರದಿಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿಗಳ ಹೇಳಿಕೆ ಅಥವಾ ಮರು ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಆರೋಪಿತ ಯಾವುದೇ ಸ್ವ-ಖುಷಿ ಹೇಳಿಕೆ ನೀಡಿಲ್ಲ ಮತ್ತು ಆತ ಹೇಳಿದಂತೆ ನಾವು ಯಾವುದೇ ವಾಹನವನ್ನು ಪರಿಶೀಲಿಸಿ ಅದನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು, ಚಿತ್ತಾಪೂರ.